O.S.No.206/2020
PW -3

ದಿನಾಂಕ 09/11/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು :- ಶ್ರೀ ಡಿ.ವಿ.ಎಸ್. ಪ್ರತಿವಾದಿ ಪರ ವಕೀಲರಿಂದ**

ನಮ್ಮ ಊರಿನ ಹನುಮಕ್ಕ ಮತ್ತು ಕಂಬಾರೆಡ್ಡಿ ರವರ ಪರಿಚಯ ಇರುತ್ತದೆ. ಅವರಿಬ್ಬರು ಇದೇ ನ್ಯಾಯಾಲಯದಲ್ಲಿ ಇದೇ ದಾವಾ ಆಸ್ತಿಗೆ ಸಂಬಂಧಿಸಿದಂತೆ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿ ಅವರ ಸ್ವತ್ತಿಗೆ ಹಾಕಿರುತ್ತಾರೆಂದು ಉತ್ತರಿಸಿರುತ್ತಾರೆ. ಸದರಿ ದಾವೆ ಚಾಲ್ತಿಯಲ್ಲಿರುತ್ತದೆ ಎಂದು ಉತ್ತರಿಸಿರುತ್ತಾರೆ. ಆ ದಾವೆಯಲ್ಲಿ ಈ ದಾವೆಯ ಸ್ವತ್ತು ನಮ್ಮದು ಎಂದು ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿ ಸೈಟ್ ಗೆ ಸಂಬಂಧ ಹಾಕಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ಸೈಟು ಯಾವ ಸರ್ವೆ ನಂಬರ್ ನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ನಮ್ಮ ತಾತನಿಗೆ ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ತಾತನ ಹೆಸರಿಗೆ ಖಾತೆ ಪಹಣಿ ಇರುವ ಬಗ್ಗೆ ದಾಖಲೆ ಕೊಟ್ಟಿರುತ್ತೇನೆ. ನಮ್ಮ ತಂದೆಯವರ ಹೆಸರಿಗೆ ಖಾತೆ ಪಹಣಿ ಆಗಿರವುದಿಲ್ಲ ಎಂದರೆ ಸಾಕ್ಷಿ ಬಸಪ್ಪ ರವರ ಹೆಸರಿಗೆ ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿ. ನಮ್ಮ ತಂದೆ ಸ್ವಾಧೀನ ಇರುವ ಬಗ್ಗೆ ಸಾಕ್ಷಿ ಮಾಡಿಸಲು ಯಾವುದೇ ತೊಂದರೆ ಇಲ್ಲ.

2. ದಾವಾ ಆಸ್ತಿ ಕೃಷ್ಣಯ್ಯ ರವರಿಗೆ ಸೇರಿತ್ತು ಎಂದರೆ ನನಗೆ ಗೊತ್ತಿಲ್ಲ. ಕೃಷ್ಣಯ ಶೆಟ್ಟಿ ರವರಿಗೆ ದಾವಾ ಆಸ್ತಿ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಕೃಷ್ಣಯ್ಯಶೆಟ್ಟಿ ರವರು ಅವರ ಹೆಂಡತಿ ರತ್ನಮ್ಮ ಇವರು ಪ್ರತಿವಾದಿಗಳಿಗೆ ಶುದ್ದ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆ ರೀತಿ ಕ್ರಯ ಪತ್ರ ಖಾತೆ ಪಹಣಿ ಯಾರ ಹೆಸರಿಗೆ ಬರುತ್ತಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಈ ದಾವೆ ಹೂಡುವ ಕಾಲಕ್ಕೆ ಯಾರ ಹೆಸರಿನಲ್ಲಿ ಖಾತೆ ಪಹಣಿ ಬರುತ್ತಿರುವ ಬಗ್ಗೆ ತಿಳಿದುಕೊಂಡಿರುವುದಿಲ್ಲ.

3. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನು ಮತ್ತು ನಮ್ಮ ಊರಿನವರು ಹೇಳಿ ಬರೆಸಿರುತ್ತೇವೆ. ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ಓದಿ ತಿಳಿದುಕೊಂಡಿದ್ದೇನೆ. ನನಗೆ ಈ ದಾವೆ ವಿಚಾರ ಗೊತ್ತಿರುವುದಿಲ್ಲ ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ